# ತಥ್ಯಗಳನ್ನು ತಿಳಿಯಿರಿ

## ಪ್ರಿಯ ವಿನಿಯೋಜಕರೆ,

ನಿಮ್ಮನ್ನು ಆದಷ್ಟು ಸಮೀಪಿಸುವ ಉದ್ದೇಶದಿಂದ, ಹಲವಾರು ವರ್ಷಗಳಿಂದ ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ (ಎನ್‌ಎಸ್‌ಇ) ಹೆಚ್ಚು ಕಡಿಮೆ ದೇಶದ ಪ್ರತೀ ಭಾಗಕ್ಕೂ ಸೆಕ್ಯೂರಿಟಿಗಳ ಆನ್-ಲೈನ್ ಟ್ರೇಡಿಂಗನ್ನು ಒದಗಿಸಿದೆ. ನಮ್ಮ ಅನುಭವ ಹಾಗೂ ವಿನಿಯೋಜಕ ಹಿತ - ಸಂರಕ್ಷಣೆಯ ನಿಟ್ಟಿನಲ್ಲಿ, ನೀವು ಅನುಸರಿಸಬೇಕಾದ ಕೆಲವು ರೂಢಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳ ಬಯಸುತ್ತೇವೆ. ಈ ಮಾರ್ಗದರ್ಶಕ ಸೂತ್ರಗಳನ್ನು ಪಾಲಿಸುವುದರಿಂದ ನಿಮ್ಮ ದೂರುಗಳು ಕಡಿಮೆಯಾಗಬಹುದು ಮತ್ತು ಎಕ್ಸ್‌ಚೇಂಜ್ ಮೂಲಕ ನಡೆಸುವ ವ್ಯವಹಾರಗಳಿಗೆ ಎನ್‌ಎಸ್‌ಇ ಒದಗಿಸಿರುವ ವಿನಿಯೋಜಕ ಸಂರಕ್ಷಣ ನಿಧಿಯ ರಕ್ಷಣೆ ದೊರೆಯಬಹುದು.

## ಎನ್‌ಎಸ್‌ಇಯಲ್ಲಿ ಟ್ರೇಡಿಂಗ್ ಸಂಬಂಧಿತ ಸುರಕ್ಷಾ ಸೂತ್ರಗಳು

ಎನ್‌ಎಸ್‌ಇಯ ಸೆಬಿ-ನೋಂದಾಯಿತ ಬ್ರೋಕರ್ಸ್ ಅಥವಾ ಅವರೊಂದಿಗೆ ಸಂಲಗ್ನ ಸೆಬಿ-ನೋಂದಾಯಿತ ಸಬ್-ಬ್ರೋಕರ್ಸ್ ಮೂಲಕ ಮಾತ್ರ ಸೆಕ್ಯೂರಿಟಿಗಳನ್ನು ಖರೀದಿಸಿರಿ ಮತ್ತು ಮಾರಿರಿ. ಎಲ್ಲ ಎನ್‌ಎಸ್‌ಇ ಬ್ರೋಕರ್ಸ್ ಮತ್ತು ಅವರ ಸಬ್-ಬ್ರೋಕರ್ಸ್ ತಾವು ಟ್ರೇಡಿಂಗ್ ಸೌಲಭ್ಯ ಒದಗಿಸುವ ಪ್ರತೀ ಸ್ಥಳದಲ್ಲೂ ಸೆಬಿ ನೋಂದಾವಣೆ ಪ್ರಮಾಣಪತ್ರ ಹಾಗೂ ಅದರೊಂದಿಗೆ ತಮ್ಮ ರಿಜಿಸ್ಟರ್ಡ್ ಆಫೀಸ್, ತಮ್ಮ ಸೆಬಿ ನೋಂದಾಯಿತ ಹೆಸರು ಮುಂತಾದವುಗಳನ್ನು ಪ್ರದರ್ಶಿಸುವುದು ಅವಶ್ಯವಾಗಿದೆ. ತಮ್ಮನ್ನು ಎನ್‌ಎಸ್‌ಇ ಬ್ರೋಕರ್ ಎಂದು ಕರೆದುಕೊಳ್ಳುವ ಯಾವುದೇ ವ್ಯಕ್ತಿಯನ್ನು ನೀವು ಸಂಪರ್ಕಿಸಿದಾಗ, ಈ ಮೇಲಿನ ವಿವರಗಳನ್ನು ಪರೀಕ್ಷಿಸಲು ಮರೆಯಬೇಡಿ.



ನೀವು ನಿಮ್ಮ ಎಲ್ಲ ವಿವರಗಳನ್ನು ''ನೋ ಯುವರ್ ಕ್ಲಯಂಟ್'' ಫಾರ್ಮ್‌ನಲ್ಲಿ ತುಂಬಿರಿ ಮತ್ತು ತದನಂತರ ''ಕ್ಲಯಂಟ್-ಬ್ರೋಕರ್'' ಒಪ್ಪಂದದ ಮೇಲೆ ಸಹಿ ಮಾಡಿರಿ.



ನೀವು ಶೇರುಗಳನ್ನು ಕೊಳ್ಳಲು ಅಥವಾ ಮಾರಲು ಆದೇಶ ನೀಡಿದಾಗ ಒಂದು ವಿಶಿಷ್ಟ ಆರ್ಡರ್ ನಂಬರ್ ನೀಡಲಾಗುವುದು. ಅದು ಟ್ರೇಡ್ ಆಗಿ ಪರಿವರ್ತನೆಗೊಂಡಾಗ, ಪ್ರತೀ ಟ್ರೇಡ್‌ಗೆ ಸಂಬಂಧಪಟ್ಟಂತೆ ಒಂದು ವಿಶಿಷ್ಟ ಟ್ರೇಡ್ ನಂಬರ್ ನೀಡಲಾಗುವುದು. ಕಾಂಟ್ರಾಕ್ಟ್ ನೋಟ್‌ಗಳಲ್ಲಿ ಈ ನಂಬರ್‌ಗಳು ನಮೂದಿಸಲ್ಪಟ್ಟಿವೆ ಎಂದು ಖಾತ್ರಿಮಾಡಿಕೊಂಡು, ಈ ನಂಬರ್‌ಗಳ ಟಿಪ್ಪಣಿ ಮಾಡಿಕೊಳ್ಳಿ.



ನೀವು ವ್ಯವಹಾರ ನಡೆಸಿದ 24 ಗಂಟೆಯೊಳಗೆ ನಿಮ್ಮ ಬ್ರೋಕರ್ ನಿಮಗೆ ಕಾಂಟ್ರಾಕ್ಟ್ ನೋಟ್ ನೀಡುತ್ತಾರೆಂಬುದನ್ನು ಖಾತ್ರಿಪಡಿಸಿಕೊಳ್ಳಿ.

ನೀವು ವ್ಯವಹಾರದ ಸತ್ಯತೆಯ ಬಗ್ಗೆ, ಎನ್‌ಎಸ್‌ಇ ವೆಬ್‌ಸೈಟ್‌ನ ವ್ಯವಹಾರ ಪರೀಕ್ಷೆ ಸೌಲಭ್ಯವಾದ URL: http: www.nseindia.com/content/equities/eq_trdverify.htm ನಲ್ಲಿ ತಾಳೆ ನೋಡಬಹುದಾಗಿದೆ. ಇದಕ್ಕಾಗಿ ನೀವು ನಿಮ್ಮ ಬ್ರೋಕರ್ ನಿಮಗೆ ನೀಡಿರುವ ಕಾಂಟ್ರಾಕ್ಟ್ ನೋಟ್‌ನಲ್ಲಿರುವ ಸಂಬಂಧಿತ ವಿವರಗಳನ್ನು ತುಂಬಿಸಬೇಕು. ಈ ಸೌಲಭ್ಯವು ವ್ಯವಹಾರದ ಸತ್ಯತೆಯನ್ನು ದೃಢೀಕರಿಸುವುದು ಮತ್ತು ವ್ಯವಹಾರ ನಡೆದ ನಂತರ 5 ದಿನಗಳವರೆಗೆ ಈ ಮಾಹಿತಿ ಲಭ್ಯವಿರುವುದು.



ನಿಮ್ಮ ಬಾಧ್ಯತೆಗಳನ್ನು ಪೂರೈಸಲು ನೀವು ನಿಮ್ಮ ಬ್ರೋಕರ್‌ಗೆ ಶೇರುಗಳನ್ನು ನೀಡುವಾಗ, ನಿಮ್ಮ ಬ್ರೋಕರ್‌ರ ನಮೂದಿತ ಖಾತೆಗೆ ಮಾತ್ರವೇ ಡೆಲಿವರಿ ಸೂಚನೆಗಳನ್ನು ನೀಡಿರಿ. ನೀವು ಶೇರು ಖರೀದಿಸುವಾಗ ಅದಕ್ಕೆ ಸಂಬಂಧಿತ ಹಣವನ್ನು ನಿಮ್ಮ ಬ್ರೋಕರ್‌ಗೆ ನೀಡುವಾಗ, ಕಾಂಟ್ರಾಕ್ಟ್ ನೋಟ್‌ನಲ್ಲಿ ಮತ್ತು ಬ್ರೋಕರರ ಸ್ಥಳದಲ್ಲಿ ಪ್ರದರ್ಶಿಸಲಾಗಿರುವ ಸೆಬಿ ನೋಂದಾವಣೆ ಪ್ರಮಾಣ ಪತ್ರದಲ್ಲಿ ನಮೂದಿಸಲ್ಪಟ್ಟಿರುವ ರೀತಿಯಲ್ಲಿ ನಿಮ್ಮ ಬ್ರೋಕರ್ ಹೆಸರಿಗೆ, ನಿಮ್ಮ ಸ್ವಂತ ಬ್ಯಾಂಕ್ ಖಾತೆಯಿಂದ, ಅಕೌಂಟ್ ಪೇಯಿ ಚೆಕ್‌ನ ಮೂಲಕವೇ ನೀಡಿರಿ. ನಗದು ವ್ಯವಹಾರ ತಪ್ಪಿಸಿ, ಏಕೆಂದರೆ ಅದರ ಲೆಕ್ಕ- ಪರಿಶೋಧನೆ ನಡೆಸುವುದು ಕಷ್ಟವಾಗುತ್ತದೆ. ಯಾವುದೇ ಸಂದರ್ಭದಲ್ಲೂ, ಮೊತ್ತ ರೂ. 20,000 ವನ್ನು ಮೀರುತ್ತಿದ್ದಲ್ಲಿ ಚೆಕ್ಕಿನ ಮೂಲಕವೇ ಹಣಪಾವತಿ ಮಾಡಿರಿ.



ನೀವು ವ್ಯವಹಾರ ನಡೆಸಿದ ನಂತರ, ಪೇಔಟ್ ದಿನಾಂಕದಿಂದ 1 ಕಾರ್ಯ - ದಿನದೊಳಗೆ, ನಿಮ್ಮ ಬ್ರೋಕರ್ ನಿಮಗೆ ಹಣಪಾವತಿ / ಡೆಲಿವರಿಗಳನ್ನು ನೀಡುತ್ತಾರೆಂದು ದಯವಿಟ್ಟು ಖಾತ್ರಿಪಡಿಸಿಕೊಳ್ಳಿ.

ನೀವು ನಿಮ್ಮ ಬ್ರೋಕರ್‌ರಿಂದ, ನಿಮ್ಮ ಫಂಡ್ಸ್ ಹಾಗೂ ಸೆಕ್ಯೂರಿಟಿಸ್‌ಗೆ ಸಂಬಂಧಪಟ್ಟ ಸ್ಟೇಟ್‌ಮೆಂಟನ್ನು ಹೆಚ್ಚಲ್ಲದಿದ್ದರೂ ಕನಿಷ್ಠ ಪಕ್ಷ 6 ತಿಂಗಳಿಗೊಮ್ಮೆಯಾದರೂ ಪಡೆದು ತಾಳೆನೋಡಲು ಹಾಗೂ ರಿಕನ್‌ಸೈಲ್ ಮಾಡಲು ಮರೆಯಬೇಡಿ. ನೀವು ನಿಮ್ಮ ಹೆಸರಲ್ಲಿ ವ್ಯವಹಾರ ನಡೆಸುತ್ತಿದ್ದಲ್ಲಿ, ದಯವಿಟ್ಟು ನಿಮ್ಮ ಕುಟುಂಬದ ಸದಸ್ಯರ / ಮಿತ್ರರ ಬ್ಯಾಂಕ್ ಖಾತೆಯಿಂದ ಚೆಕ್‌ಗಳನ್ನು ನೀಡಬೇಡಿ. ಅದೇ ಪ್ರಕಾರ ಡಿಮ್ಯಾಟ್ ಡೆಲಿವರಿ ಇನ್‌ಸ್ಟ್ರಕ್ಷನ್ ಸ್ಲಿಪ್ ಕೂಡ ಪರಿವಾರದ ಇತರ ಸದಸ್ಯರ ಹೆಸರಲ್ಲಿ ಇರದೆ, ಸ್ವಂತ ಡಿಮ್ಯಾಟ್ ಅಕೌಂಟ್‌ನಿಂದಲೇ ಇರಬೇಕು.



ಕಾಂಟ್ರಾಕ್ಟ್ ನೋಟ್ ಇತ್ಯಾದಿಗಳಲ್ಲಿ ನಿಮಗೇನಾದರೂ ವ್ಯತ್ಯಾಸ ಕಂಡುಬಂದಲ್ಲಿ, ಕೂಡಲೇ ಲಿಖಿತ ರೂಪದಲ್ಲಿ ಬ್ರೋಕರರ ಗಮನಕ್ಕೆ ತಂದು ಅವರಿಂದ ಸ್ವೀಕೃತಿ-ದಾಖಲೆ ಪಡೆದು ಈ ವ್ಯತ್ಯಾಸವನ್ನು ಅವರಿಂದ ತಿದ್ದುಪಡಿ ಮಾಡಿಸಿಕೊಳ್ಳಿ.

ನಿಮ್ಮ ಬ್ರೋಕರ್ ನಿಮ್ಮ ತಕರಾರನ್ನು ಸಮರ್ಪಕ ಅವಧಿಯೊಳಗೆ (ಉದಾಹರಣೆಗೆ 15 ದಿನಗಳೊಳಗೆ) ಬಗೆಹರಿಸದಿದ್ದಲ್ಲಿ, ಆ ಬಗ್ಗೆ ಎಕ್ಸ್‌ಚೇಂಜ್‌ನ 'ದಿ ಇನ್‌ವೆಸ್ಟರ್ ಗ್ರೀವೆನ್ಸಸ್ ಸೆಲ್'ನ ಗಮನಕ್ಕೆ ದಯವಿಟ್ಟು ತನ್ನಿರಿ. ತಕರಾರಿನ ಫಾರ್ಮ್ಯಾಟನ್ನು ಪಡೆಯಲು ಮತ್ತು ಅದನ್ನು ಎನ್‌ಎಸ್‌ಇಗೆ ಸಲ್ಲಿಸುವ ವಿಧಾನವನ್ನು ತಿಳಿಯಲು ಎನ್‌ಎಸ್‌ಇಯ ವೆಬ್‌ಸೈಟ್ ಆಗಿರುವ URL: www.nseindia.com/content/assist/asst_invcentre.htm ಗೆ ಲಾಗ್ ಆನ್ ಮಾಡಿರಿ.





ಎಕ್ಸ್‌ಚೇಂಜ್‌ನ 'ಇನ್‌ವೆಸ್ಟರ್ ಗ್ರೀವೆನ್ಸಸ್ ಸೆಲ್‌ಗೆ' ತಕರಾರನ್ನು ಸಲ್ಲಿಸುವಾಗ, ತಕರಾರಿನೊಂದಿಗೆ ಕಾಂಟ್ರಾಕ್ಟ್ ನೋಟ್ಸ್, ಹಣಪಾವತಿ/ ಸೆಕ್ಯೂರಿಟಿಸ್‌ಗಳ ಡೆಲಿವರಿ ಪುರಾವೆ ಇತ್ಯಾದಿ ಸಂಬಂಧಿತ ದಸ್ತಾವೇಜುಗಳ ಪ್ರತಿಗಳನ್ನು ಸಲ್ಲಿಸುವುದು ಅಗತ್ಯ. ಸಾಕಷ್ಟು ದಸ್ತಾವೇಜುಗಳು ಇಲ್ಲದಿದ್ದಲ್ಲಿ, ತಕರಾರುಗಳ ಬಗೆಹರಿಸುವಿಕೆ ಕಷ್ಟಸಾಧ್ಯ ಎನ್ನುವುದನ್ನು ಮರೆಯಬೇಡಿ.

*ಮಾರ್ಗದರ್ಶಕ ಸೂತ್ರಗಳು ನಿಮ್ಮ ಪ್ರಯೋಜನಕ್ಕಾಗಿ ಇವೆ.*
*ನಿಮ್ಮ ಮಾಹಿತಿಗಾಗಿ, ದಯವಿಟ್ಟು ಈ ಜಾಹೀರಾತನ್ನು ಕತ್ತರಿಸಿ ನಿಮ್ಮ ಬಳಿ ಇಟ್ಟುಕೊಳ್ಳಿ.*


**ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್**
''ಎಕ್ಸ್‌ಚೇಂಜ್ ಪ್ಲಾಜಾ'', ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬಯಿ 400051.
ಫೋನ್: 022-26598100-8114. ಫ್ಯಾಕ್ಸ್: 022-26598120. ಇ-ಮೈಲ್: cc_nse@nse.co.in
ದಯವಿಟ್ಟು ನಮ್ಮ ವೆಬ್‌ಸೈಟ್ ಸಂದರ್ಶಿಸಿ: www.nseindia.com ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಿದವರು-ಎನ್‌ಎಸ್‌ಇ.


A B and U-gf